**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ ::611/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : ನಿಂಗಪ್ಪ ದುರ್ಗಪ್ಪ ಜಕ್ಕಣ್ಣನವರ್ | **PW**-03 |
| **ತಂದೆಯ ಹೆಸರು** | : ದುರ್ಗಪ್ಪ | **CW**-01 |
| **ವಯಸ್ಸು** | : 60 | |
| **ಉದ್ಯೋಗ** | : ಸಂಚಾರಿ ಪೋಲೀಸರು | |
| **ವಾಸಸ್ಥಳ** | : ಬೆಳ್ತಂಗಡಿ. | |

**ದಿನಾಂಕಃ27-03-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ನಾನು ಮೇ 2023 ರಿಂದ 2025 ಫೆಬ್ರವರಿ ವರೆಗೆ ಶೃಂಗೇರಿ ಪೋಲೀಸ್ ಠಾಣೆಯಲ್ಲಿ, ಉಪ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿನಾಂಕ 16.04.2024 ರಂದು ನಾನು ಶೃಂಗೇರಿ ಪೋಲೀಸ್ ಠಾಣೆಯಲ್ಲಿ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 1.00 ಗಂಟೆಗೆ ಬಾತ್ಮೀದಾರರಿಂದ ಶೃಂಗೇರಿ ತಾ. ಕೊಚ್ಚವಳ್ಳಿ ಗ್ರಾಮದ ಹಂದಿ ಬನದಲ್ಲಿರುವ ಮಲ್ನಾಡ್ ಗ್ರಾಮದ ರಮೇಶ್ ನಾಯ್ಕ ರವರ ಕಾಫಿ ತೋಟದ ಬಳಿ ತೆಕ್ಕೂರು ಮಲ್ನಾಡ್ ರಸ್ತೆಯಲ್ಲಿ ಯಾರೋ ಇಬ್ಬರು ಬಂದೂಕುಗಳನ್ನು ಹಿಡಿದುಕೊಂಡು ಹೋಗುತ್ತಿದ್ದಾರೆ ಎಂಬ ಮಾಹಿತಿಯು ಬಂದ ಮೇರೆಗೆ ನಾನು ಠಾಣೆಯಲ್ಲಿದ್ದ ಚಾಸಾ 4 ರಿಂದ ಚಾಸಾ-6 ರವರುಗಳನ್ನು ಸದರಿ ಸ್ಥಳಕ್ಕೆ ಹೋಗಿ ಪರಿಶೀಲಿಸಲು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಹೋಗುವಾಗ್ಗೆ ತೆಕ್ಕೂರು ಸರ್ಕಲ್ ಬಳಿ ನಿಂತಿದ್ದ ಚಾಸಾ-2 ಮತ್ತು ಚಾಸಾ-3 ರವರುಗಳಿಗೆ ಸದರಿ ಪ್ರಕರಣದ ಮಾಹಿತಿಯನ್ನು ತಿಳಿಸಿ, ಪ್ರಕರಣದಲ್ಲಿ ಪಂಚಸಾಕ್ಷಿದಾರರಾಗಿ ಸಹಕರಿಸುವಂತೆ ನೋಟೀಸು ನೀಡಿರುತ್ತೇನೆ.

3. ತದನಂತರ ನಾವೆಲ್ಲರೂ ಇಲಾಖಾ ಜೀಪಿನಲ್ಲಿ ಮಧ್ಯಾಹ್ನ 1.30 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ನೋಡಲಾಗಿ ಸದರಿ ಮಲ್ನಾಡ್ ಗ್ರಾಮದ ರಮೇಶ್ ನಾಯ್ಕ ರವರ ಕಾಫಿ ತೋಟದ ಎದುರು ಇರುವ ಅರಣ್ಯ ಗುಡ್ಡದಲ್ಲಿ ಯಾರೋ ಇಬ್ಬರು ಅಸಾಮಿಗಳು ಕೈಯಲ್ಲಿ ಬಂದೂಕುಗಳನ್ನು ಹಿಡಿದುಕೊಂಡು ಬರುತ್ತಿರುವುದು ಕಂಡು ಬಂತು. ಸಮವಸ್ತ್ರದಲ್ಲಿದ್ದ ನಮ್ಮನ್ನು-

ಕಂಡು ಅವರು ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಸದರಿ ಆರೋಪಿತರನ್ನು ನಮ್ಮ ಸಿಬ್ಬಂದಿಗಳು ಹಿಡಿದು ನನ್ನ ಮುಂದೆ ಹಾಜರು ಪಡಿಸಿ ವಿಚಾರಿಸಿದಾಗ 1 ನೇ ಆರೋಪಿ/ ಗುಂಡಯ್ಯ ಬಿನ್ ಲೇಟ್ ಮಂಜಯ್ಯ, 2 ನೇ ಆರೋಪಿ ಪೂರ್ಣೇಶ್ / ಬಿನ್ ಸುರೇಂದ್ರ ಎಂದು ತಿಳಿಸಿದ್ದು, ಸದರಿ ತಮ್ಮ ಬಳಿ ಇಟ್ಟುಕೊಂಡಿರುವ ಬಂದೂಕುಗಳನ್ನು ಹೊಂದಿರಲು ಯಾವುದೇ ಪರವಾನಗಿ ಹೊಂದಿಲ್ಲ ಎಂದು ತಿಳಿಸಿದರು.

4. ಮುಂದುವರೆದು 1 ನೇ ಆರೋಪಿ ಸದರಿ 2 ಬಂದೂಕುಗಳನ್ನು 10 ವರ್ಷಗಳ ಹಿಂದೆ ತಮ್ಮ ತಂದೆ ಎಲ್ಲಿಂದಲೋ ತಂದು ನಮ್ಮ ಮನೆಯಲ್ಲಿ ಇಟ್ಟಿದ್ದರು ಮತ್ತು ಆ ಪೈಕಿ 1 ಬಂದೂಕನ್ನು 1 ನೇ ಆರೋಪಿತರು ತಮ್ಮ ಬಳಿ ತೆಗೆದುಕೊಂಡು ಹೋಗಿದ್ದರು ಎಂದು ತಿಳಿಸಿದರು.

5. ನಾನು 1 ನೇ ಆರೋಪಿಯ ಬಳಿ ಇದ್ದ ಬಂದೂಕನ್ನು ಪರಿಶೀಲಿಸಿ ನೋಡಿದ್ದು, ಅವುಗಳ ಪೂರ್ಣ ಉದ್ದ 57 ಇಂಚು, ಬ್ಯಾರೆಲ್ ಉದ್ದ 40 ಇಂಚು, ಬ್ಯಾರೆಲ್ ಇಂದ ಕೆಳಗೆ ಬಟ್ ತುದಿಯ ವರೆವಿಗೂ 17 ಇಂಚು ಇರುತ್ತದೆ. ನಳಿಕೆಯಿಂದ ಮೇಲ್ಭಾಗ ಬ್ಯಾರೆಲ್ ಕೆಳಗೆ 3 ತಗಡಿನ ಕಟ್ಟು ಇರುತ್ತದೆ. ಸದರಿ ಆರೋಪಿತರ ಬಳಿ ಇದ್ದ ಮಾಸಲು ಬಣ್ಣದ ಬಟ್ಟೆಯ ಕೈ ಚೀಲವನ್ನು ನಾನು ಪರಿಶೀಲಿಸಿದ್ದು, ಅದರಲ್ಲಿ 4 ಪ್ಲಾಸ್ಟಿಕ್ ಸಣ್ಣ ಡಬ್ಬಿಗಳಿದ್ದು, ಅದರಲ್ಲಿ ಹಸಿರು ಬಣ್ಣದ ಡಬ್ಬಿಯಲ್ಲಿ 8 ಗುಂಡುಗಳು ಹಾಗೂ 27 ದಪ್ಪ ಚರೆಗಳು ಇದ್ದವು. ಸಿಮೆಂಟ್ ಬಣ್ಣದ ಡಬ್ಬಿ ಪರಿಶೀಲಿಸಿಲಾಗಿ ಅದರಲ್ಲಿ 50 ಗ್ರಾಂ ತೂಕದಷ್ಟು ಮಸಿ ಪೌಡರ್ ಇತ್ತು, ಬಿಳಿ ಬಣ್ಣದ ಡಬ್ಬಿ ಪರಿಶೀಲಿಸಿಲಾಗಿ ಅದರಲ್ಲಿ ಸುಮಾರು 10 ಗ್ರಾಂ ಮಸಿ ಪೌಡರ್ ಇತ್ತು ಮತ್ತೊಂದು ಬಿಳಿ ಬಣ್ಣದ ಡಬ್ಬಿ ಪರಿಶೀಲಿಸಿಲಾಗಿ ಅದರಲ್ಲಿ 24 ಕೇಪುಗಳು ಇದ್ದವು. ಮತ್ತೊಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಗಳನ್ನು ಪರಿಶೀಲಿಸಿಲಾಗಿ ಅದರಲ್ಲಿ 36 ಸಣ್ಣ ಗಾತ್ರದ ಚರೆಗಳು ಇದ್ದವು. ಸದರಿ 36 ಸಣ್ಣ ಗಾತ್ರದ ಚರೆಗಳನ್ನು ಹಸಿರು ಬಣ್ಣದ ಡಬ್ಬಿಯಲ್ಲಿದ್ದ ಗುಂಡುಗಳು ಮತ್ತು ದಪ್ಪ ಚರೆಗಳೊಂದಿಗೆ ಹಾಕಿರುತ್ತದೆ.

6. ನಾನು ಮುಂದುವರೆದು 2 ನೇ ಆರೋಪಿತರ ಕೈಯಲ್ಲಿದ್ದ ಬಂದೂಕನ್ನು ಅಳತೆ ಮಾಡಿದಾಗ ಅವುಗಳ ಪೂರ್ಣ ಉದ್ದ 58 ಇಂಚು, ಬ್ಯಾರೆಲ್ ಉದ್ದ 41 ಇಂಚು, ಬ್ಯಾರೆಲ್ ಇಂದ ಕೆಳಗೆ ಬಟ್ ತುದಿಯ ವರೆವಿಗೂ 17 ಇಂಚು ಇರುತ್ತದೆ. ನಳಿಕೆಯಿಂದ ಮೇಲ್ಭಾಗ ಬ್ಯಾರೆಲ್ ಕೆಳಗೆ 2 ತಗಡಿನ ಕಟ್ಟು ಇರುತ್ತದೆ. 2 ಬಂದೂಕುಗಳ ಮೇಲೆ ಯಾವುದೇ ಸಂಖ್ಯೆ ಕಂಡು ಬಂದಿರುವುದಿಲ್ಲ. ತದ ನಂತರ ನಾನು ಸ್ಥಳದಲ್ಲಿಯೇ ಸದರಿ ಬಂದೂಕುಗಳು ಮತ್ತು ಗುಂಡುಗಳು ಮತ್ತು ಮೇಲೆ ಎಲ್ಲಾ ವಸ್ತುಗಳನ್ನು ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಸ್ಥಳದಲ್ಲಿಯೇ ಅಮಾನತು ಪಡಿಸಿಕೊಂಡು ಅವುಗಳನ್ನು ಒಂದು ಬಿಳಿಯ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಕಟ್ಟಿ ಅದಕ್ಕೆ H.M ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇವೆ. ಸದರಿ ಮಹಜರ್ ಅನ್ನು ಬೆಳಗ್ಗೆ ಮಧ್ಯಾಹ್ನ 1.30 ರಿಂದ 3.00 ರವರೆವಿಗೂ ದಾಖಲಿಸಿರುತ್ತೇನೆ. ಸದರಿ ಸಂದರ್ಭದಲ್ಲಿ ಭಾವಚಿತ್ರಗಳನ್ನು ಹಾಗೂ ವೀಡಿಯೋ ಚಿತ್ರೀಕರಣವನ್ನು ಮಾಡಿರುತ್ತೇನೆ. ಈಗ ಸಾಕ್ಷಿಯು ಸದರಿ ಸ್ಥಳ ಮತ್ತು ಅಮಾನತು ಪಂಚನಾಮೆಯ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ *ನಿಪಿ-1* ಎಂದು ನಿಶಾನೆಗೊಂಡಿರುತ್ತದೆ. ಸದರಿ *ನಿಪಿ-1* ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-1(ಸಿ)** ಎಂದು ಗುರುತಿಸಲಾಯಿತು. ಸದರಿ ಸಂದರ್ಭದಲ್ಲಿ ತೆಗೆದ ಒಂದು ಭಾವ ಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ -2** ಎಂದು ಗುರುತಿಸಲಾಯಿತು. ಸದರಿ ನಿಪಿ-2 ರ ಕೆಳಗೆ ಮತ್ತೊಂದು ಭಾವ ಚಿತ್ರ ಇರುವಂತೆ ಕಂಡು ಬಂದಿದ್ದು, ಸದರಿ ಭಾವ ಚಿತ್ರ ಅಪೂರ್ಣ ಸ್ಥಿತಿ ಮತ್ತು ಅಳತೆಯಲ್ಲಿ ಇದ್ದು ಮತ್ತು ಅದು ಭಾವಚಿತ್ರ ಆಗಿರುವುದಿಲ್ಲ ಎಂದು ಆರೋಪಿತರ ಪರ ವಕೀಲರು ತಕರಾರು ವ್ಯಕ್ತ ಪಡಿಸಿದ್ದು, ಸದರಿ ತಕರಾರನ್ನು ಮಾನ್ಯ ಮಾಡಿ ಒಂದು ಭಾವ ಚಿತ್ರವನ್ನು ಮಾತ್ರ ನಿಶಾನೆಗೊಳಿಸಲಾಗಿರುತ್ತದೆ.

7. ನಂತರ ಆರೋಪಿತರನ್ನು ದಸ್ತಗಿರಿ ಮಾಡಿ ಪೋಲೀಸ್ ಠಾಣೆಯಲ್ಲಿ ಚಾಸಾ-12 ರವರ ಸಮಕ್ಷಮ ಹಾಜರು ಪಡಿಸಿರುತ್ತೇನೆ. ಮುಂದುವರೆದು ನಾನು ಸದರಿ ಆರೊಪಿತರ ಸ್ವಯಿಚ್ಛಾ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಅಮಾನತು ಪಡಿಸಿಕೊಂಡ 2

ಬಂದೂಕುಗಳು ಮತ್ತು ಗುಂಡುಗಳು, ಕೇಪುಗಳು ವಸ್ತುಗಳನ್ನು ಠಾಣಾ ಪಿ.ಎಫ್ ನಂ. 28/2024 ರಂತೆ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮುಂದುವರಿದು ಸದರಿ ಅಮಾನತು ಪಡಿಸಿಕೊಂಡ ಸದರಿ Arms and ammunition ಬಗ್ಗೆ ಜಿಲ್ಲಾ ವರಿಷ್ಠಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ತದ ನಂತರ ನಾನು ಪ್ರಕರಣದ ವರದಿಯನ್ನು ತಯಾರು ಮಾಡಿ ಚಾಸಾ-12 ರವರಿಗೆ ಅದೇ ದಿನ ಸಂಜೆ 3.45 ಕ್ಕೆ ನೀಡಿರುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-3** ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, **ನಿಪಿ-3(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಈ ಕೆಳಕಂಡ ವಸ್ತುಗಳಾದ -

| | | |
|---|---|---|
| 1. | 2 S.B.M.L ಬಂದೂಕುಗಳು, | **ಮು.ಮಾ-1 ಮತ್ತು 2** |
| 2. | 1 ಹಸಿರು ಬಣ್ಣದ ಡಬ್ಬಿಯಲ್ಲಿ ನ್ಯಾಯಾಲಯದ ಮುಂದಿರುವ 4 ಗುಂಡುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸಾಕ್ಷಿಯು ಅಮಾನತು ಪಡಿಸಿಕೊಂಡಿದ್ದ 8 ಗುಂಡುಗಳನ್ನು FSL ಗೆ ಕಳುಹಿಸಿದ್ದು FSL ನಿಂದ 4 ಗುಂಡುಗಳು ಮಾತ್ರ ಹಿಂತಿರುಗಿಸಿರುತ್ತಾರೆ ಎಂದು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಾಗಿ | **ಮು.ಮಾ-3** |
| 3. | ನ್ಯಾಯಾಲಯದ ಮುಂದೆ ಈ ದಿನ ತೆರೆದು ನೋಡಲಾದ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ 19 ದಪ್ಪ ಚರೆಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ | **ಮು.ಮಾ-4** |
| 4. | ಈಗ ಸಾಕ್ಷಿಯು ಸಿಮೆಂಟ್ ಬಣ್ಣದ ಡಬ್ಬಿಯನ್ನು ನೋಡಿ ಗುರುತಿಸಿದ್ದು, ಅದರೊಳಗೆ ಸುಮಾರು 50 ಗ್ರಾಂ ನಷ್ಟು ಮಸಿ ಪೌಡರ್ ಇದೆ ಎಂದು ಗುರುತಿಸಿರುತ್ತಾರೆ. ಅದನ್ನು | **ಮು.ಮಾ-5** |
| 5. | ಈಗ ಸಾಕ್ಷಿಯು ಬಿಳಿ ಬಣ್ಣದ ಡಬ್ಬಿಯನ್ನು ನೋಡಿ ಗುರುತಿಸಿದ್ದು, ಅದರೊಳಗೆ ಸುಮಾರು 10 ಗ್ರಾಂ ನಷ್ಟು ಮಸಿ ಪೌಡರ್ ಇದೆ ಎಂದು ಗುರುತಿಸಿರುತ್ತಾರೆ. ಅದನ್ನು | **ಮು.ಮಾ-6** |
| 6. | ಈಗ ಸಾಕ್ಷಿಯು ಇನ್ನೊಂದು ಬಿಳಿ ಬಣ್ಣದ ಡಬ್ಬಿ ಯೊಳಗೆ 21 ಕೇಪುಗಳು ಇವೆ ಎಂದು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ | **ಮು.ಮಾ-7** |

| | | |
|---|---|---|
| 7. | ಈಗ ಸಾಕ್ಷಿಯು ಬಿಳಿ ಬಣ್ಣದ ಪ್ಲಾಸ್ಟಿಕ್ ಕವರ್ ಅನ್ನು ನೋಡಿ ಗುರುತಿಸಿದ್ದು, ಅದರೊಳಗೆ 20 ಸಣ್ಣ ಚರೆಗಳು ಇದ್ದು ಅವುಗಳನ್ನು ಒಟ್ಟಾಗಿ | **ಮು.ಮಾ-8** |

**ಮು.ಮಾ.-1** ರಿಂದ **ಮು.ಮಾ-8** ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿತರ ಸ್ವಯಿಚ್ಛಾ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಭಾಗಾಂಶವನ್ನು **ನಿಪಿ-4** ಮತ್ತು **ನಿಪಿ-5** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.H.R.U ವಕೀಲರಿಂದಃ**

ಬಾತ್ಮೀದಾರರಿಂದ ಬಂದ ಮಾಹಿತಿಯ ಮೇರೆಗೆ ನಾನು ಈ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ಕೃತ್ಯದ ಬಗ್ಗೆ ಮಾಹಿತಿ ಬಂದಾಗ ತನಿಖೆಗೆ ಬೇಕಾದ ಪೂರಕಗಳೊಂದಿಗೆ ತಯಾರು ಮಾಡಿಕೊಂಡು ನಾವು ಸ್ಥಳಕ್ಕೆ ಭೇಟಿ ನೀಡುತ್ತೇವೆ ಎಂದರೆ ಸರಿ. ನಮ್ಮ ಪೋಲೀಸ್ ಠಾಣೆಯಿಂದ ಕೃತ್ಯ ನಡೆದ ಸ್ಥಳ 10 ರಿಂದ 12 ಕಿ.ಮೀ ದೂರವಿದೆ. ಕೃತ್ಯ ನಡೆದ ಸ್ಥಳದ 2-3 ಕಿ.ಮೀ ಅಂತರದಲ್ಲಿ ಯಾವುದೇ ವಾಸದ ಮನೆಗಳು ಇರುವುದಿಲ್ಲ. ಮಲೆನಾಡು ಭಾಗದಲ್ಲಿ 2-3 ಕಿ.ಮೀ ಅಂತರದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿಯಲ್ಲ.

2. ಆರೋಪಿತರು ಕೋವಿಗಳನ್ನು ಕೈಯಲ್ಲಿ ಹಿಡಿದುಕೊಂಡು ಹೋಗುತ್ತಿರುವಾಗ ನಾವು ಯಾವುದೇ ಭಾವ ಚಿತ್ರವನ್ನು ತೆಗೆದುಕೊಂಡಿರುವುದಿಲ್ಲ. ನಿಪಿ-2 ರಲ್ಲಿ 1 ನೇ ಆರೋಪಿತರ ಬಳಿ ಇತ್ತು ಎಂದು ಹೇಳಲಾದ ಒಂದು ಮಾಸಲು ಬಣ್ಣದ ಚೀಲ ಕಂಡು ಬರುತ್ತಿಲ್ಲ ಎಂದರೆ ಸರಿ. ಮು.ಮಾ-1 ಮತ್ತು ಮು.ಮಾ-2 ನಿರ್ದಿಷ್ಟವಾಗಿ ಯಾರ ಕೈಯಲ್ಲಿ ಯಾವಕೋವಿ ಇತ್ತು ಎಂದು ನಿಪಿ-1 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಸದರಿ ಮು.ಮಾ-1 ಮತ್ತು ಮು.ಮಾ-2 ಕೋವಿಗಳನ್ನು ಪರಿಶೀಲಿಸಿದಾಗ ಅವು ಖಾಲಿ ಇದ್ದವು.

3. ಮು.ಮಾ-1 ಮತ್ತು ಮು.ಮಾ-2 ಕೋವಿಗಳನ್ನು ಸಜೀವ ಗುಂಡುಗಳಿಂದ ಗುಂಡು ಹಾರಿಸಲು ಸಾಧ್ಯವಿರುವುದಿಲ್ಲ ಎಂದರೆ ಸರಿ. ಸದರಿ ಮು.ಮಾ-1 ಮತ್ತು ಮು.ಮಾ-2

ಕೋವಿಗಳಲ್ಲಿ ಗುಂಡು ಹಾರಿಸಬೇಕೆಂದರೆ ಚರೆ, ಗುಂಡು, ಕೇಪು ಮತ್ತು ಮಸಿ ಇವುಗಳನ್ನು ಕೋವಿಗಳಲ್ಲಿ ತುಂಬಿಸಿ ತದ ನಂತರ ಗುಂಡು ಹಾರಿಸಬೇಕಾಗುತ್ತದೆ ಎಂದರೆ ಸರಿ. ಆರೋಪಿತರು ಸದರಿ ದಿನದಂದು ಮು.ಮಾ-1 ರಿಂದ ಮು.ಮಾ-8 ಕೋವಿ ಮತ್ತು ಇತರೆ ಸಾಮಾಗ್ರಿಗಳನ್ನು ತಮ್ಮ ಬಳಿ ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಮು.ಮಾ-3 ರಿಂದ ಮು.ಮಾ-8 ವಸ್ತುಗಳನ್ನು ಅಧಿಕೃತ ಪರವಾನಗಿ ಹೊಂದಿದ ವ್ಯಕ್ತಿ ಮಾತ್ರ ಮಾರಾಟ ಮಾಡಬೇಕಾಗುತ್ತದೆ ಎಂದರೆ ಸರಿ.

4. ನಾನು ಸ್ಥಳದಲ್ಲಿ ನನ್ನ ವರದಿಯನ್ನು ತಯಾರು ಮಾಡಿರುವುದಿಲ್ಲ. ನಿಪಿ-1 ಹಾಗೂ ನಿಪಿ -3 ದಾಖಲೆಗಳನ್ನು ನಾನು ಪೋಲೀಸ್ ಠಾಣೆಯಲ್ಲಿಯೇ ತಯಾರು ಮಾಡಿ ಚಾಸಾ-2 ಮತ್ತು ಚಾಸಾ-3 ರವರ ಸಹಿಗಳನ್ನು ಪೋಲೀಸ್ ಠಾಣೆಯಲ್ಲಿಯೇ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು ಚಾಸಾ-3 ರವರು ನಮ್ಮ ಜೊತೆ ವಾಪಾಸ್ ಪೋಲೀಸ್ ಠಾಣೆಗೆ ಬಂದಿರುವುದಿಲ್ಲ. ನಿಪಿ-1 ಅನ್ನು ಚಾಸಾ-7 ರವರು ಅವರು ಬರೆದಿರುತ್ತಾರೆ. ನ್ಯಾಯಾಲಯದ ಮುಂದೆ ಸದರಿ 1 ನೇ ಆರೋಪಿತರಿಂದ ಅಮಾನತು ಪಡಿಸಿಕೊಂಡ ಮಾಸಲು ಬಣ್ಣದ ಚೀಲ ಇರುವುದಿಲ್ಲ ಎಂದರೆ ಸರಿ. ಮು.ಮಾ-3 ರಿಂದ ಮು.ಮಾ -8 ರಲ್ಲಿರುವ ವಸ್ತುಗಳ ಸಂಖ್ಯೆಗೂ ಪಿ.ಎಫ್.ಸಂಖ್ಯೆ 28/2024 ರಲ್ಲಿ ನಮೂದಿಸಿರುವ ವಸ್ತುಗಳ ಸಂಖ್ಯೆಗೂ ಸಾಮ್ಯವಿರುವುದಿಲ್ಲ ಎಂದರೆ ಸರಿಯಲ್ಲ.

5. ಮು.ಮಾ-5 ಮತ್ತು ಮು.ಮಾ-6 ಮಸಿಯ ತೂಕವನ್ನು ನಾವು ನಮ್ಮ ಜೊತೆ ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದಲ್ಲಿ ಅಳತೆ ಮಾಡಿರುತ್ತೇವೆ. ಸದರಿ ವಿಚಾರವನ್ನು ನಿಪಿ-1 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಸದರಿ ತೂಕದ ಯಂತ್ರ ನಿಪಿ-2 ರಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ಆರೋಪಿತರುಗಳ ಸ್ವಯಿಚ್ಛಾ ಹೇಳಿಕೆಯನ್ನು ನಾನು ಪಂಚ ಸಾಕ್ಷಿದಾರರ ಸಮಕ್ಷಮ ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿ.

6. ನಿಪಿ-4 ಮತ್ತು ನಿಪಿ-5 ಸ್ವಯಿಚ್ಛಾ ಹೇಳಿಕೆಗಳನ್ನು ನಾನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹೇಳಿದಂತೆ ಆರೋಪಿತರು ತಮ್ಮ ಬಳಿ ಕೃತ್ಯ ನಡೆದ ಸ್ಥಳದಲ್ಲಿ ಮು.ಮಾ-1 ರಿಂದ 8 ವಸ್ತುಗಳನ್ನು ಅಕ್ರಮವಾಗಿ ಇಟ್ಟುಕೊಂಡು

ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ 8 ವಸ್ತುಗಳಿಗೂ ಆರೋಪಿತರುಗಳಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮು.ಮಾ-1 ರಿಂದ 8 ವಸ್ತುಗಳನ್ನು ಆರೋಪಿತರಿಂದ ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೋಸ್ಕರ ನಿಪಿ -1 ರಿಂದ ನಿಪಿ -5 ದಾಖಲೆಗಳನ್ನು ಮತ್ತು ಮು. ಮಾ-1 ರಿಂದ 8 ವಸ್ತುಗಳನ್ನು ಪೋಲೀಸ್ ಠಾಣೆಯಲ್ಲಿಯೇ ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

7. ಚಾಸಾ-4 ರಿಂದ ಚಾಸಾ-7 ಪೋಲೀಸ್ ಸಿಬ್ಬಂದಿಗಳನ್ನು ಈ ಪ್ರಕರಣಕ್ಕೋಸ್ಕರ ನಾನು ಸಹಕರಿಸುವಂತೆ ಕೋರಿಕೊಂಡು ಪ್ರಕರಣ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ನಿಪಿ-3 ರಂತೆ ಸುಳ್ಳು ವರದಿಯನ್ನು ಸಲ್ಲಿಸಿ ನ್ಯಾಯಾಲಯದಲ್ಲಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿಃ

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.